**<u>ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾಹಿತಿ</u>**

**<u>ಸೂಚನೆ:</u>**

ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿಯ ಟಿ.ಬಳ್ಳೆಕೆರೆ, ಆವೇರಹಳ್ಳಿ, ಗರೀಬಿ ಕಾಲೋನಿ ಇತ್ಯಾದಿ ಗ್ರಾಮಗಳ ರೈತರುಗಳಿಗೆ ಓಡಾಡಲು ಮತ್ತು ಬಂಡೀ ದಾರಿ ಇಲ್ಲದೇ ಸಂಕಷ್ಟದಲ್ಲಿ ಸಿಲುಕಿರುತ್ತಾರೆ ಮತ್ತು ವ್ಯವಸಾಯವನ್ನೇ ಜೀವನೋಪಾಯಕ್ಕಾಗಿ ಅವಲಂಬಿಸಿ ನಿರ್ವಹಿಸುತ್ತಿರುವ ರೈತರುಗಳು ಅವರವರುಗಳ ಹೊಲ-ಗದ್ದೆಗಳಿಗೆ ವ್ಯವಸಾಯ ಪರಿಕರಗಳೊಡನೆ ತೆರಳಲು ಸಾಧ್ಯವಾಗದೇ ಬಾರಿ ಸಂಕಷ್ಟದಲ್ಲಿರುತ್ತಾರೆ. ಆವೇರಹಳ್ಳಿ ಗ್ರಾಮದ ಸರ್ವೆ ನಂಬರ್ 3ರಲ್ಲಿ ಗರೀಬಿ ಕಾಲೋನಿ ಇದ್ದು, ಸದರಿ ಕಾಲೋನಿ ರಸ್ತೆಯಿಂದ ಟಿ. ಬಳ್ಳೇಕೆರೆ ಗ್ರಾಮದಿಂದ ಹೊಲ-ಗದ್ದೆಗೆ ಬರುವ ರಸ್ತೆಗೆ ಸದರಿ ಕಾಲೋನಿ ರಸ್ತೆಯು ಸರ್ವೆ ನಂ.6ರ ಮುಖಾಂತರ ಹಾದು ಹೋಗಿ ಟಿ.ಬಳ್ಳೆಕೆರೆ ಗ್ರಾಮದ ರಸ್ತೆಯಿಂದ ಇತ್ಯಾದಿ ಗ್ರಾಮಗಳ ರಸ್ತೆಯನ್ನು ಸಂಪರ್ಕಿಸುತ್ತದೆ. ಸರ್ವೆ ನಂ. 6 ಗೋಮಾಳದ ಜಮೀನಾಗಿದ್ದು, ಈ ಜಮೀನಿನ ಮೂಲಕ ಬಂಡಿ ದಾರಿಯನ್ನು ಮಾಡಿಕೊಡುವುದರಿಂದ ಅನೇಕ ಗ್ರಾಮಗಳಿಗೆ ಅನುಕೂಲವಾಗುತ್ತದೆ. ಈ ದಿಸೆಯಲ್ಲಿ ಗ್ರಾಮಸ್ಥರಿಂದ ಮದ್ದೂರು ತಹಶೀಲ್ದಾರರಿಗೆ ಮನವಿಯೂ ಸಲ್ಲಿಕೆಯಾಗಿರುತ್ತದೆ. ಆದ್ದರಿಂದ ಅನೇಕ ಗ್ರಾಮಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರ್ವೆ ನಂ.6ರ ಗೋಮಾಳದ ಜಮೀನಿನಲ್ಲಿ ಬಂಡಿ ರಸ್ತೆ ನಿರ್ಮಿಸಿಕೊಡುವ ದಿಸೆಯಲ್ಲಿ ನಿಯಮ 72ರಡಿಯಲ್ಲಿ ಪ್ರಶ್ನಿಸಿದ್ದು, ಇದಕ್ಕೆ ಸಂಬಂಧಪಟ್ಟಂತೆ ಈವರೆವಿಗೂ ಉತ್ತರ ಸಲ್ಲಿಕೆಯಾಗದಿರುವ ಬಗ್ಗೆ ಮತ್ತು ರಸ್ತೆಯನ್ನು ನಿರ್ಮಿಸದಿರುವ ಅಧಿಕಾರಿ/ನೌಕರರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ

**<u>ಉತ್ತರ:</u>**

ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿಯ ಟಿ ಬಳ್ಳೆಕೆರೆ, ಆವೇರಹಳ್ಳಿ, ಗರೀಬಿ ಕಾಲೋನಿ ಇತ್ಯಾದಿ ಗ್ರಾಮಗಳ ರೈತರುಗಳು ವ್ಯವಸಾಯ ಪರಿಕರಗಳೊಡನೆ ಹೊಲ-ಗದ್ದೆಗಳಿಗೆ ತೆರಳಲು ಬಂಡಿದಾರಿಯನ್ನು ನಿರ್ಮಿಸಿಕೊಡಬೇಕೆಂದು ಕೋರುತ್ತಿರುವ ಪ್ರದೇಶವು ಜಿಲ್ಲಾಧಿಕಾರಿಯವರ ಆದೇಶ ಸಂಖ್ಯೆ:ಎಲ್.ಎನ್.ಡಿ.ಜಿ.ಡಿ.ಆರ್/1007/1977-78 ದಿನಾಂಕ:31.12.1977 ರಂತೆ ಶ್ರೀಮತಿ ಸಾಕಮ್ಮ ಕೋಂ ಬೋರೇಗೌಡ ರವರಿಗೆ 1.00 ಎಕರೆ, ಕೃಷ್ಣಗೌಡ ಬಿನ್ ಮರೀಗೌಡ ರವರಿಗೆ 1.00 ಎಕರೆ ಮತ್ತು ಶ್ರೀ ಎಂ ರಾಜು ರವರಿಗೆ 1.04 ಎಕರೆ (ಪ್ರಸ್ತುತ ಶ್ರೀಮತಿ ರತ್ನಮ್ಮ ಕೋಂ ಲೇಟ್ ಎಂ ರಾಜು ರವರ ಹೆಸರಿನಲ್ಲಿರುತ್ತದೆ.) ಮಂಜೂರಾಗಿದ್ದು, ಮಂಜೂರಿದಾರರು/ ವಾರಸುದಾರರು ಸ್ವಾಧೀನಾನುಭವದಲ್ಲಿದ್ದು ಸದರಿ ಜಮೀನಿನಲ್ಲಿ ತೆಂಗು, ಅಡಿಕೆ ಮತ್ತು ಜೋಳದ ಬೆಳೆಗಳನ್ನು ಬೆಳೆದಿರುತ್ತಾರೆ. ರೈತರುಗಳು ವ್ಯವಸಾಯ ಪರಿಕರಗಳೊಡನೆ ಹೊಲ-ಗದ್ದೆಗಳಿಗೆ ತೆರಳಲು ಬಂಡಿದಾರಿಯನ್ನು ನಿರ್ಮಿಸಿಕೊಡಬೇಕೆಂದು ಕೋರುತ್ತಿರುವ ಪ್ರದೇಶದಲ್ಲಿ ಗ್ರಾಮ ನಕಾಶೆಯಂತೆ ಬಂಡಿದಾರಿ ಸ್ವರೂಪ ಇರುವುದಿಲ್ಲ ಹಾಗೂ ಸದರಿ ಪ್ರದೇಶವು ಮಂಜೂರಾಗಿರುವ ಪ್ರದೇಶವಾಗಿದ್ದು ಮಂಜೂರಿದಾರರು ಸ್ವಾಧೀನಾನುಭವದಲ್ಲಿರುವುದರಿಂದ ಹೊಸದಾಗಿ ಬಂಡಿದಾರಿ ನಿರ್ಮಾಣಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಹ ನಿಯಮಾನುಸಾರ ಅವಕಾಶವಿರುವುದಿಲ್ಲ.

**(ಆರ್‌ಡಿ 41 ಎಲ್‌ಜಿವಿವ್ಯೆ 2026)**

**(ಡಾ: ಜಿ. ಪರಮೇಶ್ವರ)**
ಉಪ ಮುಖ್ಯಮಂತ್ರಿ